Vol. 2, Issue: 5, June: 2014
ISSN:(P) 2347-5404 ISSN:(O)2320 771X

# ಜನ್ನನ ಯಶೋಧರ ಚರಿತೆಯ ಅಮೃತಮತಿ ಮತ್ತು ಆಧುನಿಕ ವಿಮರ್ಶೆ

ಡಿ.ಪುರುಷೋತ್ತಮ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಸಿದ್ಧಾರ್ಥನಗರ, ಮೈಸೂರು.

ಜನ್ನ ಬಹುಮುಖ ಪ್ರತಿಭೆಯುಳ್ಳವನು. ಜೀವನದಲ್ಲಿ ಬಯಸಬಹುದಾದುದನ್ನೆಲ್ಲ ಯಥೇಚ್ಛವಾಗಿ ಪಡೆದ ಭಾಗ್ಯಶಾಲಿ. ಕವಿಯೂ, ವಿದ್ವಾಂಸನೂ, ಬಿರುದಾಂಕಿತನೂ ಆದ ಈತನದು ಶ್ರೀಮಂತಿಕೆ ಸಂಸ್ಕೃತಿಗಳೆರಡೂ ಕೂಡಿದ್ದ ಮನೆತನ. ಇದೇ ಜನ್ನನಿಗೆ ಲೌಕಿಕ ಪಾರಮಾರ್ಥಿಕ ಸಾಧನೆಗಳೆರಡರಲ್ಲೂ ಉತ್ಸಾಹವುಳ್ಳ ವ್ಯಕ್ತಿತ್ವವುಂಟಾಗಲು ಕಾರಣವಾಯಿತು.

ಜನ್ನ ಹುಟ್ಟಿದ ವರ್ಷವಾಗಲೀ ಸತ್ತ ವರ್ಷವಾಗಲಿ ತಿಳಿದು ಬರುವುದಿಲ್ಲ. ಅನಂತನಾಥ ಜಿನನು ಹುಟ್ಟಿದ ಆಷಾಢ ಕೃಷ್ಣತ್ರಯೋದಶಿ ರೇವತಿ ನಕ್ಷತ್ರ ಶಿವಯೋಗದಲ್ಲೇ ತಾನೂ ಹುಟ್ಟಿದ್ದಾಗಿ ಹೇಳಿದ್ದರೂ ಯಾವ ವರ್ಷವೆಂಬುದನ್ನೂ ಹೇಳಿಲ್ಲ. ಅವನ ಕೃತಿಗಳಲ್ಲಿಯೇ ಅವುಗಳ ಕಾಲವನ್ನೂ ಹೇಳಲಾಗಿದೆ. ಅದರ ಪ್ರಕಾರ ಕ್ರಿಶ.1191ರಲ್ಲಿ ಚನ್ನರಾಯಪಟ್ಟಣದ 179ನೆಯ ಶಾಸನವನ್ನು ಕ್ರಿ.ಶ1197ರಲ್ಲಿ ತರೀಕೆರೆಯ 45ನೆಯ ಶಾಸನಗಳನ್ನು ಬರೆದ ಉಲ್ಲೇಖವಿದೆ. `ಅನುಭವ ಮುಕುರ' ವೆಂಬ ಲಘು ಕಾವ್ಯವೂ ಈತನದೇ ಎನ್ನಲಾಗಿದೆ. ಕ್ರಿ.ಶ 1230ರಲ್ಲಿ `ಅನಂತನಾಥ ಪುರಾಣ'ವನ್ನು ರಚಿಸಿದುದಾಗಿ ಜನ್ನ ಹೇಳಿಕೊಂಡಿದ್ದಾನೆ. ತನ್ನನ್ನು ತಾನು `ಕವಿಚಕ್ರವರ್ತಿ' ಚತುರ್ವಿಧ ಪಂಡಿತನ್, ನವವೈಯಾಕರಣನ್ ತರ್ಕವಿನೋದನ್, ಭರತಸುರತ ಶಾಸ್ತ್ರ ವಿಳಸನ್ ಎಂದು ಹೇಳಿಕೊಂಡಿದ್ದಾನೆ ಜನ್ನನ ನಂತರದ ಕವಿಗಳು ಜನ್ನನನ್ನು ವಿನಯದಿಂದ ಸ್ಮರಿಸಿದ್ದಾರೆ.

ಲೌಕಿಕ ಆಗಮಿಕ ಕಾವ್ಯ ಬರೆಯಬೇಕೆಂಬ ಪಂಪಾದಿಗಳ ಮಾರ್ಗವನ್ನು ಜನ್ನ ತುಳಿಯದೇ ಎರಡೂ ಧಾರ್ಮಿಕ ಕಾವ್ಯಗಳನ್ನೇ ಬರೆದಿದ್ದಾನೆ. ಅದರಲ್ಲಿಯೂ ಜನ್ನನ `ಯಶೋಧರ ಚರಿತೆ' ಕಾವ್ಯ ಪುಟ್ಟದಾದರೂ ತನ್ನ ವಸ್ತು ವೈಶಿಷ್ಟ್ಯದಿಂದ ಎಲ್ಲಾ ಕಾಲದ ವಿದ್ವಾಂಸರ, ವಿಮರ್ಶಕರ ಗಮನವನ್ನು ತನ್ನತ್ತ ಸೆಳೆದಿದೆ, ಸೆಳೆಯುತ್ತಿದೆ.

ಯಶೋಧರ ಚರಿತೆಯ ಕೃತಿಯ ಸಂಪಾದನಾಕಾರರು, ಸಾಹಿತ್ಯ ಚರಿತ್ರೆಕಾರರು, ನವೋದಯ, ನವ್ಯ ಸಂಪ್ರದಾಯದ ವಿಮರ್ಶಕರೂ ಒಳಗೊಂಡಂತೆ ಇತ್ತೀಚಿನ ವಿಮರ್ಶಕರು ತಮ್ಮ ತಮ್ಮ ಲೇಖನಗಳಲ್ಲಿ ವಿಶೇಷವಾಗಿ ಚರ್ಚಿಸರುವುದು ಅಮೃತಮತಿ ಅಷ್ಟಾವಂಕ ಸಂಬಂಧದ ವಿಚಾರವನ್ನೇ ಎನ್ನುವುದು ವಿಶೇಷ ಶತಮಾನದ ಸಾಹಿತ್ಯ ವಿಮರ್ಶೆ ಎಂಬ ಕೃತಿಯಲ್ಲಿ ಜಿ.ರಾಜಶೇಖರ ಅವರು `ಜನ್ನನ ಯಶೋಧರ ಕಾವ್ಯದ ದ್ವಂದ್ವ ವಿನ್ಯಾಸ' ಎಂಬ ಲೇಖನವನ್ನು ಬರೆದಿದ್ದಾರೆ. ಜನ್ನನ ಶೈಲಿಯನ್ನು ಮೆಚ್ಚಿಕೊಂಡಿದ್ದಾರೆ. ಅಮೃತಮತಿಯು ಅಷ್ಟಾವಂಕನ ಕುಲ ನೆಲೆಗಳನ್ನು ಗಮನಿಸದೆ ಮೋಹದ ತೀವ್ರತೆಯಲ್ಲಿ ಹೇಗೆ ತನ್ನ ಆವರಣದ ಮೌಲ್ಯಗಳಾದ ಸಂಯಮ ಶ್ರೇಣೀಕೃತ ವ್ಯವಸ್ಥೆಯ ಮರ್ಯಾದೆ, ದಾಂಪತ್ಯ ನಿಷ್ಠೆ, ಮಾತ್ರವಲ್ಲದೆ ತನ್ನ ಸುತ್ತ ಇರುವವರ ಸೌಂದರ್ಯಾನುಭೂತಿಯ ಮಾನದಂಡಗಳನ್ನು ಕೂಡ ತಿರಸ್ಕರಿಸಿದ್ದಾಳೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಬಂದಿರುವ ಪ್ರಮುಖ ವಿಮರ್ಶಕರ `ಅಮೃತಮತಿಯದು ಅನೈತಿಕ ರತಿ' ಎಂಬ ಒಮ್ಮತದ ಅಭಿಪ್ರಾಯಗಳನ್ನು ಅಲ್ಲಗಳೆಯಲು ಕಾವ್ಯದಿಂದಲೇ ಆಧಾರಗಳನ್ನು ತಿಳಿಸುತ್ತಾರೆ. ಅಮೃತಮತಿಯ ಪ್ರವೃತ್ತಿ ಕಾಮ ಮಾತ್ರವಲ್ಲ ಅದು ಸಕಲೇಂದ್ರಿಯಗಳ

ಅನುಭವವನ್ನೂ ಇಷ್ಟಪಟ್ಟು ಅದಕ್ಕೆ ಹಾತೊರೆಯುವಂತದ್ದು. ಆದರೆ ಅವಳು ಬಾಳಿದ ಸಂಸ್ಕೃತಿಯ ಆವರಣ ಇದಕ್ಕೆ ತದ್ವಿರುದ್ಧವಾದ ನಿಗ್ರಹವನ್ನು ಬೋಧಿಸುತ್ತದೆ. ಹೀಗೆ ಅಮೃತಮತಿಯ ಪಾತ್ರ ಕಾವ್ಯದಲಿ ಇಂದ್ರಿಯ ನಿರಾಕರಣೆಯನ್ನು ವಿರೋಧಿಸುವ ಜೀವನ ದೃಷ್ಟಿಯ ಸಂಕೇತವಾಗಿದೆ' ಎನ್ನುತ್ತಾರೆ.

ಎನಿತೊಳವಪಾಯ ಕೋಟಿಗ
ಳನಿತರ್ಕಂ ಗೇಹಮಲ್ತೆ ದೇಹಮಿದಂ ನೆ
ಟ್ಟನೆ ಪೊತ್ತು ಸುಖಮನಱಸುವ
ಮನುಜಂ ಮೊರಡಿಯೊಳ್ ಮಾದುಪಱಳಮನಱರಸದಿರಂ(1-51)

ಚಂಡಕರ್ಮ ಅಭಯರುಚಿ ಅಭಯಮತಿಯರನ್ನು ಚಂಡಮಾರಿಗೆ ಬಲಿಕೊಡಲು ಹಿಡಿದೊಯ್ಯುತ್ತಿರುವ ಸಂದರ್ಭದಲ್ಲಿ ಅಭಯಮತಿ ತನ್ನ ಅಣ್ಣನಿಗೆ ಪರಸ್ಪರ ಧೈರ್ಯ ಹೇಳುವ ಸಂದರ್ಭದಲ್ಲಿ ಬಂದಿರುವ ಈ ಪದ್ಯ ಇಂದಿಗೂ ಪ್ರಸ್ತುತವಾಗಿದೆ. ಇದರಲ್ಲಿ ಮನುಷ್ಯ ದೇಹಕ್ಕೆ ಬರಬಹುದಾದ ಅಪಾಯ ಸಾಧ್ಯತೆಗಳ ಪ್ರಮಾಣವನ್ನು ತಿಳಿಸಲಾಗಿದೆ. ಚಿಕ್ಕ ವಯಸ್ಸಿನ ಅಭಯಮತಿಯ ಬಾಯಲ್ಲಿ ಇಂತಹ ಅನುಭವ ಮಿಳಿತ ಮಾತುಗಳು ಬರುವುದಕ್ಕೆ ಅವರು ಈ ಹಿಂದೆ ಕಳೆದ ಆರು ಭವಗಳ ಭವನಿಬದ್ಧವೇ ಕಾರಣವಾಗಿದೆ ಎನ್ನ ಬಹುದು. ಕತ್ತಲು-ಬೆಳಕು, ಕಷ್ಟ-ಸುಖ, ಜೊತೆಜೊತೆಯಾಗಿರುವಂತೆ ಸಿಹಿ ಕಹಿಯೂ ಬಾಳಿನಲ್ಲಿ ಇದ್ದೇ ಇರುತ್ತದೆ. ಇವೆರಡನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಮಾಗಿದ ಅನುಭವ ಅಭಯರುಚಿ ಅಭಯಮತಿಯರದು ಭೌತಿಕ ದೇಹ ಎದುರಿಸಬೇಕಾದ, ಎದುರಿಸಬಹುದಾದ ಅಪಾಯಗಳು ಅಸಂಖ್ಯ. ಪ್ರಾಣಿವರ್ಗದಲ್ಲಿಯೋ ಪ್ರಭಾವ ಶಾಲಿಯಾಗಿರುವ ಮಾನವ ದೇಹಕ್ಕೆ ಹಲವು ಮಾರ್ಗಗಳಿಂದ ಅಪಾಯಗಳು ಉಂಟಾಗಬಹುದು. ಉದಾ: ನೈಸರ್ಗಿಕ ವಿಕೋಪಗಳಿಂದ, ಅಪಘಾತಗಳಿಂದ, ಭಯೋತ್ಪಾದಕತೆಯಿಂದ, ಕಾಡುಮೃಗಗಳಿಂದ, ಹಲವು ರೀತಿಯ ಕಾಯಿಲೆಗಳಿಂದ.

ಇಂದು ವೈದ್ಯರ ಸಂಖ್ಯೆ ಹೆಚ್ಚಿದಂತೆ ಔಷಧಿಗಳ ಸಂಖ್ಯೆಯೂ ಹೆಚ್ಚಿದೆ ಇವುಗಳಿಗೆ ಸ್ಪರ್ಧೆ ಹೂಡುವಂತೆ ಕಾಯಿಲೆಗಳೂ ಸಹ ಹೆಚ್ಚಿವೆ. ದೇಹದ ಪ್ರತಿಯೊಂದು ಅಂಗಗಳಿಗೂ ಹಲವು ರೀತಿಯ ಕಾಯಿಲೆಗಳನ್ನು ಪಟ್ಟಿ ಮಾಡಬಹುದಾಗಿದೆ. ಹೆಸರಿಡಲಾಗದ, ಹೆಸರಿಸಲಾಗದ, ವಾಸಿಯಾಗದ, ಔಷದಿಯೇ ಇಲ್ಲದ ಹಲವು ಕಾಯಿಲೆಗಳು ದಿನಪ್ರತಿ ತಲೆದೋರುತ್ತಲೇ ಇವೆ. ಇಂತಹ ದೇಹಕ್ಕೆ ಸುಖವೆಲ್ಲಿ ಎಂಬುದೇ ಜನ್ನನ ಪ್ರಶ್ನೆ

ಈ ಎಲ್ಲಾ ಕಾಯಿಲೆಗಳಿಗೆ ನಾವು ಸೇವಿಸುವ ಗಾಳಿ, ಕಲಬೆರಕೆ ಆಹಾರ, ಮಾಲಿನ್ಯ ಭರಿತ ನೀರು, ವಾಯುಮಂಡಲದಲ್ಲಿ ಹೆಚ್ಚುತ್ತಿರುವ ಇಂಗಾಲದ ಡೈ ಆಕ್ಸೈಡ್, ರಂಧ್ರವಾಗುತ್ತಿರುವ ಓಜೋನ್, ಕಡಿಮೆಯಾಗುತ್ತಿರುವ ಅರಣ್ಯ, ಬಳಸುವ ರಾಸಾಯನಿಕ, ಕುಸಿಯುತ್ತಿರುವ ಅಂತರ್ಜಲ ಇವೆಲ್ಲ ತಂದೊಡ್ಡುವ ಅಪಾಯಗಳ ನೇರ ಗುರಿ ಮಾನವ ದೇಹವೆ ಆಗಿದೆ. ಸುಮಾರು ಎಂಟು ನೂರು ವರ್ಷಗಳ ಹಿಂದೆಯೇ ಜನ್ನ ಆ ರೀತಿ ಹೇಳಬೇಕಾದರೆ ಈಗಿನ ಪರಿಸ್ಥಿತಿಯನ್ನು ಊಹಿಸಿ ಕೊಳ್ಳಲು ಸಾಧ್ಯವಿಲ್ಲ.

ಇಲ್ಲಿ `ಅಮೃತಮತಿ ಮಾವುತನೊಬ್ಬನ ರಾಗದ ಇಂಪಿಗೆ ಮನಸೋತು ತನ್ನನ್ನೇ ಅಪಹರಿಸಿ ಕೊಳ್ಳುವ ಪ್ರಸಂಗ ಆಧುನಿಕ ಸಾಹಿತ್ಯ ವಲಯದಲ್ಲಿ ಅಪಾರ ಚರ್ಚೆಗೆ ಒಳಗಾಗಿರುವ ಪ್ರಸಂಗವಾಗಿದೆ. ಪ್ರಣಯ ಪ್ರಸಂಗವು ಜೀವ, ಪ್ರೇಮ, ಕಾಮ ಒಳಗೊಂಡುದ್ದು ಎಂಬುದು ಎಲ್ಲಾ ಅಭಿಪ್ರಾಯ ಆದರೆ ಸ್ತ್ರೀ ಜೀವನದಲ್ಲಿ ಅದು ವ್ಯಕ್ತವಾದ ಪರಿ ಬಹಳ ಭಿನ್ನವಾದ್ದು ಆಕೆಯ ಪ್ರೇಮ ಕಾಮಗಳೆಲ್ಲಾ ಸತ್ತು ಸೊರಗುವು ಹಂತಕ್ಕೆ ತಲುಪಿಬಿಟ್ಟಿದೆ. ಇಂಥ ಹೆಣ್ಣಿನ ಪ್ರೇಮವನ್ನು, ಕಾಮವನ್ನು ಅರ್ಥಮಾಡಿಕೊಳ್ಳದ ಗಂಡನ ಮುಂದೆ ತಾನು ಸುಳಿದಾಡುವ ಬರೀ ಹಕ್ಕಿ ಮಾತ್ರ ಆಗಿದ್ದಾಳೆ.

ಇದು ಜೀವ;
ಪ್ರೇಮ ಕಾಮ ಒಳಗೊಂಡಿದ್ದು

ನಿನ್ನೆದುರು ಸುಳಿಯುವ ಈ ಹಕ್ಕಿ
ಅಷ್ಟಾವಕ್ರ ಹಸಿ ಹಸಿ ಬದಗನಲಿ
ರೆಕ್ಕೆ ಬಿಚ್ಚಿ ಹಾರುವುದೇಕೆ?.......... (ಅಮೃತಮತಿಯ ಸ್ವಗತ)

ಅಮೃತಮತಿಯ ಬಗ್ಗೆ ಇಲ್ಲಿ ಸಹಾನುಭೂತಿ ವ್ಯಕ್ತಪಡಿಸುವುದಾದರೆ ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯ ಕೊಂದು ಕೂಗದೆ ನರರಂ' ಎಂಬುದು ಅನ್ವಯವಾಗುತ್ತದೆ. ಅಥವಾ ಆಕೆಯ ಜಾರತನದಿಂದ ಆತನನ್ನು ಸೇರಿದಳು ಎಂದಾದರೆ ಅವಳ ಅನುಭವಿಸಿದ ಕಷ್ಟಗಳೂ ಮಾಡಿದ ತಪ್ಪಿಗೆ ಪ್ರಾಯಶ್ಚಿತವಾಗುತ್ತದೆ. ಪಾಪಿಗುದ್ಧಾರ ಮಿಹುದು ಸೃಷ್ಟಿಯ ಬೃಹದ್ ವ್ಯೂಹದೊಳ್' ಎನ್ನುವ ಕುವೆಂಪುರವರೇ ಅಮೃತ ಮತಿಯ ಈ ನೀಚ ಸಂಸ್ಕೃತಿಯನ್ನು ಕುಲಟೆ ಜಾರಿಣಿ ಎಂದೆಲ್ಲಾ ಹಳಿಯುವ ಮಾತುಗಳನ್ನಾಡಿದ್ದಾರೆ ಅಮೃತಮತಿಯ ಬಗ್ಗೆ ಕ್ಷಮಿಸಲು ಸಾಧ್ಯವೇ ಅಮೃತಮತಿಯ ಅವಸ್ಥೆ ಎಷ್ಟರ ಮಟ್ಟಿಗೆ ಮುಂದುವರಿಯುತ್ತದೆಂಬದನ್ನು ಕವಿ ಕಾವ್ಯದಲ್ಲಿ ಚಿತ್ರಿಸಿದ್ದಾನೆ.

ಹೊಸ ತಲೆಮಾರಿನ ಹೊಸ ಆಲೋಚನೆ, ಹೊಸತನ ಕಾವ್ಯವನ್ನು ಗ್ರಹಿಸುವ ನೆಲೆಗಳು ಬಹಳ ಭಿನ್ನವಾಗಿರುತ್ತದೆ.

ಹಸಿವಿದ್ದು ಒಡಲ ಮುಚ್ಚುವ
ಕಾತುರವಿದ್ದೂ ತಣ್ಣಗೆ ನಗುವ
ಈ ಹೂವುಗಳು
ಒಳಗೊಳಗೇ ಉಕ್ಕಿ ಜ್ವಲಿಸುವುದು ಕಂಡು
ಸಿಟ್ಟಿಗೆದ್ದಿದ್ದೇನೆ........

ಅಮೃತಮತಿ ತನ್ನ ತಾನು ಹಕ್ಕಿಯೊಂದಿಗೆ ಹೋಲಿಕೆ ಮಾಡಿಕೊಳ್ಳುವುದರೊಂದಿಗೆ; ಬದಗನಿಗೆ ಮನವಿತ್ತ ಪರಿಯನ್ನು, ಕಂಡು ಕರುಬಿದ ಹೆಣ್ಣತನಕ ಕೇಳುವ ಮಾತಾಗಿದೆ. ತನ್ನಂತೆ ಆಸೆಯಿದ್ದೂ ನರಕಯಾತನೆ ಅನುಭವಿಸುವ ಅಸಂಖ್ಯಾತ ಹೀವಿನಂತಹ ಹೆಣ್ಣಗಳನ್ನು ಕಂಡು ಸಿಟ್ಟಿಗೆದ್ದೀದ್ದೇನೆ ಎನ್ನುತ್ತಾಳೆ. ಆಕೆಯ ಸಿಟ್ಟು ಇರುವುದು ಹಸನಾದ ನಗುವಿನ ಪುರುಷರ ವಿರುದ್ಧ ಮಾತ್ರವಲ್ಲ, ತಣ್ಣಗೆ ನಗುವ ಸ್ತ್ರೀಲೋಕದ ವಿರುದ್ಧ ಕೂಡ ಎಂಬುದು ಇಲ್ಲಿ ಧ್ವನಿತವಾದ ನೋವಾಗಿದೆ. ಇಂತಹ ಚಿಂತನ ಜನ್ನನ ಕಾಲಕ್ಕೆ ಇರಲಿಲ್ಲ. ಕಾವ್ಯದ ಉದ್ದೇಶಗಳೇನು ಎಂಬ ಪ್ರಶ್ನೆ ಮೂಡುತ್ತದೆ. ಜನ್ನನ ಕಾಲದ ಮನಸ್ಥಿತಿಗಳು ಮತ್ತು ಸಾಮಾಜಿಕ ಒತ್ತಡಗಳನ್ನು ನಾವು ಗಮನದಲ್ಲಿ ಇಟ್ಟುಕೊಂಡು ಕಾವ್ಯವನ್ನು ವಿಮರ್ಶೆ ಒಳಪಡಿಸಿದಾಗ ವ್ಯಕ್ತವಾಗುವ ಅಭಿಪ್ರಾಯ ಬಹಳ ಭಿನ್ನವಾಗಿರುತ್ತದೆ. ಕಾವ್ಯದ ಓದು ಮತ್ತು ಅದರಿಂದ ಸಿಗುವ ಭಾವದ ಆನಂದವನ್ನು ಓದುಗ ವರ್ಗ ಅನುಭವಿಸುತ್ತದೆ. ಆದರೆ ವಿಮರ್ಶೆ ಮಾತ್ರ ತನ್ನ ಕಾಲದ ನೆಲೆ ಮತ್ತು ವಿಮರ್ಶಕನ ದೃಷ್ಟಿಕೋನ ಬಹಳ ವೈವಿಧ್ಯತೆಗಳನ್ನು ಒಳಗೊಂಡ ಮಾದರಿಗಳನ್ನು ಆಧುನಿಕ ತಲೆಮಾರಿನಲ್ಲಿ ಕಾಣಬಹುದು. ಬಹುಶಃ ಅಮೃತಮತಿಯಂತ ಪಾತ್ರದಲ್ಲಿ ಗಟ್ಟಿತನ ಇರುವ ಕಾರಣದಿಂದಲೇ ಇಂದಿಗೂ ಓದುಗ ಮತ್ತು ವಿಮರ್ಶಕನ ದೃಷ್ಟಿಯಲ್ಲಿ ಇಂದಿಗೂ ಜೀವಂತವಾಗಿದ್ದಾಳೆ. ಒಂದು ಪಾತ್ರ ಶತಮಾನಗಳಿಂದ ಕಾಲದ ಪ್ರವಾಹದ ಜೊತೆ ಜೊತೆಗೆ ತನ್ನ ಅಂತರ್ಯದ ಜೀವಂತಿಕೆಯನ್ನು ಬದಲಿಸದೇ ಮರು ಓದು, ವಿಮರ್ಶೆ, ಮರುಸೃಷ್ಟಿ ಅವಕಾಶ ಮಾಡಿಕೊಡುವುದರ ಮೂಲಕವೇ ಅದರ ಗಟ್ಟಿತನ ನಮಗೆ ಗೋಚರಿಸುತ್ತದೆ. ಸಮಾಜಕ್ಕೆ ಉತ್ತಮ ರೀತಿಯಲ್ಲಿ ಬದುಕುವ ಆದರ್ಶ ಪಾತ್ರಗಳಷ್ಟೇ ಮುಖ್ಯವಾಗಿ ಆದರ್ಶವಲ್ಲದ ಪಾತ್ರಗಳು ತನ್ನ ಜೀವಂತಿಕೆಯನ್ನು ಉಳಿಸಿ ಕೊಳ್ಳಲು ಅಷ್ಟೇ ಗಟ್ಟಿಯಾಗಿ ನಿಲ್ಲುತ್ತವೆ. ಅಮೃತಮತಿಯ ಪಾತ್ರ ಆ ಸಾಲಿಗೆ ನಿಲ್ಲುವಂತದ್ದು. ಆಧುನಿಕ ಮನಸ್ಸು ಅಮೃತಮತಿಯನ್ನು ಅನೇಕ ನೆಲೆಗಳಲ್ಲಿ ನಿರಾಕರಿಸಿದೆ, ಅದೇ ರೀತಿಯಲ್ಲಿ ಮರುಸೃಷ್ಟಿಗೂ ಒಳಪಡಿಸಿದೆ, ಹಾಗೆ ಮರುವ್ಯಾಖ್ಯೆಗೆ ಪುರಸ್ಕೃತವಾಗಿದೆ. ನವೋದಯ ಕಾಲದಿಂದ ಇಂದಿನವರೆಗೂ ಬಹಳ ಚರ್ಚೆಗೆ ಒಳಗಾದ ಸ್ತ್ರೀ ಪಾತ್ರಗಳ ಪೈಕಿ ಅಮೃತಮತಿಯದೆ ಮೊದಲ ಸ್ಥಾನವೆಂದು ಹೇಳ ಬಹುದು. ಸರಿ ತಪ್ಪುಗಳ ಈ ರೀತಿ ವೈಯುಕ್ತಿಕ ಅಭಿಪ್ರಾಯಗಳನ್ನು ಹೊರತು ಪಡಿಸಿ. ನೇರವಾಗಿ ಕಾವ್ಯದ ಕಥೆ ಮತ್ತು ಕಥಾಸಂವಿಧಾನಕ್ಕೆ ಈ ಪಾತ್ರವನ್ನು ಇಟ್ಟು ಗಮನಿಸಿದಾಗ.

ಇದು ಸಹಜತೆಯನ್ನು ಮೀರಿ ನಿರ್ಮಾಣಗೊಂಡ ಪಾತ್ರವಾಗಿದೆ. ಧರ್ಮಬೋಧನೆ ಇಲ್ಲಿ ಮುಖ್ಯವಾದ ಕಾವ್ಯದ ಆಶಯವಾದ ಕಾರಣ ಯಶೋಧರನಿಗೆ ಸಂಬಂಧಿಸಿದಂತೆ ಸಿಗಬೇಕಾದ ಮೋಕ್ಷಕ್ಕೆ ಅಮೃತಮತಿ ಸಾಧನವಾಗಿದ್ದಾಳೆ. ಬಹುಶಃ ಅಮೃತಮತಿ ಆದರ್ಶಹೆಣ್ಣಿನ ಪಾತ್ರವಾಗಿ ನಿರ್ಮಾಣಗೊಂಡಿದ್ದರೆ ಯಶೋಧರನಿಗೆ ಪುನರ್ ಜನ್ಮಗಳು ಸಿಗುತ್ತಿರಲಿಲ್ಲ ಅದೇ ರೀತಿ ಅವನಿಗೆ ಮೋಕ್ಷ ಕೂಡ ಸಿಗುತ್ತಿರಲಿಲ್ಲ. ಆ ಕಾರಣದಿಂದಲೇ ಯಶೋಧರನ ಮೋಕ್ಷ ಸಾಧನವಾಗಿ ಅಮೃತಮತಿ ರೂಪುಗೊಂಡಿದ್ದಾಳೆ ಎಂದು ಹೇಳಬಹುದು. ಏಕೆಂದರೆ ಜನ್ನನ ಧಾರ್ಮಿಕ ನಿಷ್ಠಮನಸ್ಸು ಧಾರ್ಮಿಕ ಸಾಧನೆಗೆ ಏನೆಲ್ಲ ಬೇಕೊ ಅದನ್ನು ಅಮೃತಮತಿಯಿಂದ ಪಡೆದೇ. ಯಶೋಧರನ ಪಾಲಿಗೆ ಅವನ ಮಡದಿ `ಜಾರೆ' ಯಾಗಿ, ಅದೇ ದೃಷ್ಟಿಯಲ್ಲೇ ಅವಳ ಪಾತ್ರ ನಿರ್ಮಾಣಗೊಂಡಿರುವುದು. ಹಿಡಿ ಕಾವ್ಯದ ಉದ್ದೇಶವನ್ನೇ ಹೊರಗಿಟ್ಟು ಎಲ್ಲ ಅಮೃತಮತಿಯ ಸಂಬಂಧಗಳ ಬಗ್ಗೆ ಧೀರ್ಘ ಚರ್ಚೆ ಮಾಡಿರುವ ಪಟ್ಟಿಯನ್ನು ಆಧುನಿಕ ಕಾಲದಲ್ಲಿ ನಾವು ಕಾಣಬಹುದು.

ಕ.ವೆಂ.ರಾಘವಾಚಾರ್ ಅವರು ಅವಳ ಪಾತ್ರದ ಬಗ್ಗೆ ಜನ್ನ ಕಾಣಿಸುವುದನ್ನು ಹೀಗೆ ಗುರುತಿಸುತ್ತಾರೆ: `` ಒಳಸೋತು ಜಾರಿದ ಹೆಣ್ಣನ್ನು ಅತಿನೂತ್ನ ಗೀತಪಾತನ ವಿಕಲಸ್ವಾಂತೆ ಎಂದು ಅರ್ಥಮಾಡಿಕೊಳ್ಳ ಹೋಗಿದ್ದಾನೆ. ಎಂದರೆ, ಅಮೃತಮತಿಯ ಪಾಪವನ್ನು ಉಪೇಕ್ಷೆಯಿಂದಾಗಲೀ, ಲಾಘವದಿಂದಾಗಲೀ ಕಾಣುತ್ತಾನೆಂದಲ್ಲ. ದೋಷಖಂಡನೆಯ ಜೊತೆಗೆ ಸೋತ ಹೆಣ್ಣಿಗೆ ಸಹಾನುಭೂತಿಯನ್ನೂ ತೋರಿಸುವಂತೆ ಕಾಣುತ್ತದೆ.

ತೀ.ನಂ.ಶ್ರೀಕಂಠಯ್ಯನವರು ತಮ್ಮ `ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ'(1947) ಎಂಬ ಲೇಖನದಲ್ಲಿ `ಪ್ರಣಯ ನಿರೂಪಣೆ'ಯೇ ಯಶೋಧರ ಕಾವ್ಯದ ತಿರುಳು'. ಅಮೃತಮತಿಯು ಯಾವ ನಾಚಿಕೆಯೂ, ಯಾರ ಅಂಜಿಕೆಯೂ ಇಲ್ಲದ, ಒಬ್ಬ ಜಾರಸ್ತ್ರೀಯಂತೆ ಗುಪ್ತವಾಗಿ, ಜಾರ ಅಷ್ಟಾವಂಕನೊಡನೆ ಸ್ವೇಚ್ಛೆಯಿಂದ ವಿಹರಿಸುವಳು; ಅವನ ಸಹವಾಸದಿಂದ ತೊನ್ನು ತಂದುಕೊಳ್ಳುವಳು; ಅದಮ್ಯವಾದ ವ್ಯಾಮೋಹಕ್ಕೆ ಬಲಿಯಾಗಿ ಹೇಗೆ ಆಕೆ ಶೀಲ, ಗುಣ, ರೂಪ ಕಳೆದುಕೊಂಡು ನರಕಕ್ಕೆ ಇಳಿದಳು ಎಂಬುದನ್ನು ಜನ್ನ ನಿರೂಪಿಸುವುದನ್ನು ಚರ್ಚಿಸುತ್ತ `` ಅಮೃತಮತಿಯ ಪಾತಕವೇ ಚಂಡಶಾಸನನ ಪಾತಕಕ್ಕಿಂತ ಘೋರತರ. ಚಂಡಶಾಸನ ಸಹಗಮನವು ಅವನ ದುಷ್ಕೃತ್ಯಗಳಿಗೆ ಒಂದು ಬಗೆಯ ಪ್ರಾಯಶ್ಚಿತ್ತ ಎನ್ನುತ್ತಾ `` ಈ ಎರಡು ಕಾವ್ಯಗಳಲ್ಲೂ ಜನ್ನನ ಮನಸ್ಸು ಏಕ ರೀತಿಯ ದುರಂತ ಪಾತ್ರಗಳ ಕಡೆಗೇ ಏಕೆ ಒಲಿಯಿತು? ಇಲ್ಲಿ ವಿಧಿಯ ಕ್ರೌರ್ಯವೆಷ್ಟು? ಮಾನವನ ದೌರ್ಬಲ್ಯವೆಷ್ಟು? ಹೀಗೆ ಸಂಸಾರಗಳು ಒಡೆದು ಛಿದ್ರವಾಗುವುದಕ್ಕೆ ಯಾರು ಯಾರು ಎಷ್ಟೆಷ್ಟು ಕಾರಣ? ಇದೇ ಇಲ್ಲಿಯ ಸಮಸ್ಯೆ. ಈ ಸಮಸ್ಯೆ ಜನ್ನನಿಗೂ ಹರಿಯದು. ಈ ರಹಸ್ಯವನ್ನು ಬೇಧಿಸಲು ಜನ್ನನಿಗೂ ಸಾಧ್ಯವಾಗಿಲ್ಲ" ಎಂಬ ತೀರ್ಮಾನಕ್ಕೆ ಬರುತ್ತಾರೆ.
ಎನ್.ಎಸ್.ಲಕ್ಷೀನಾರಾಯಣಭಟ್ಟ ಅವರು ಜನ್ನನ ಯಶೋಧರ ಚರಿತೆಯನ್ನು ಕುರಿತು ಒಂದು ಲೇಖನದಲ್ಲಿ ``ಇದರಲ್ಲಿ ಅಮೃತಮತಿಗೆ ಸಂಬಂಧಿಸಿದ ಭಾಗ ಬಹುಶಃ ಮೊದಲು ಜಾತಕ ಕಥೆಗಳಲ್ಲಿದ್ದು ಅನಂತರ ಮಾರ್ಗಕವಿಗಳ ಕೈಗೆ ಸಿಕ್ಕು ಕ್ರಮೇಣ ಬೆಳೆದಂತೆ ತೋರುತ್ತದೆ. ಜಾತಕ ಕಥೆಗಳು ಮತ್ತು ಕಥಾ ಸರಿತ್ಸಾಗರದಂತಹ ಕೃತಿಗಳಲ್ಲಿ ಅಮೃತಮತಿಯನ್ನು ಹೋಲುವ ಅನೇಕ ಜಾರಸ್ತ್ರೀಯರು ಬರುತ್ತಾರೆ. ಕಥಾಸರಿತ್ಸಾಗರದಲ್ಲಿ ಅಂಗವಿಕಲನಾದ ತನ್ನ ಉಪ ಪತಿಗೋಸ್ಕರ ಗಂಡನನ್ನು ಕೊಲ್ಲಲು ಯತ್ನಿಸುವ ಹೆಂಗಸೊಬ್ಬಳ ಕಥೆ ಬರುತ್ತದೆ. ದಂಡಿಯ ದಶಕುಮಾರ ಚರಿತ(ನಾಲ್ಕನೆಯ ಆಶ್ವಾಸ)ದಲ್ಲಿ ಅಂತಹದೊಂದು ಕಥೆ ಇದೆ. ರಾಣಿಯೊಬ್ಬಳು ಹೆಳವನಾದ ಮಾವುತನನ್ನು ಕಟ್ಟಿಕೊಂಡು ಅವನಿಂದ ಚಾಟಿ ಏಟು ತಿನ್ನುವುದನ್ನು ನಿರೂಪಿಸುವ ಒಂದು ಕಥೆ ಹೇಮಚಂದ್ರನ ಪರಿಶಿಷ್ಟ ಪರ್ವದಲ್ಲಿ ಬರುತ್ತದೆ. ದಕ್ಷಿಣ ದೇಶದವರಾದ ಗುಣಾಢ್ಯ, ದಂಡಿ ಮೊದಲಾದವರಲ್ಲಿಯೇ ಇಂತಹ ಜಾನಪದ ಕಥೆಗಳು ಹೆಚ್ಚಾಗಿ ಇವೆ. ಆದ್ದರಿಂದ ಇವು ದ್ರಾವಿಡ ಮೂಲವುಳ್ಳ ಕಥೆಗಳಿರಬೇಕೆಂದು ವಿದ್ವಾಂಸರ ಊಹೆಯಿದೆ. ಸಂಸ್ಕೃತ, ಪ್ರಾಕೃತಗಳಲ್ಲಿಯೇ ಅಲ್ಲದೆ ತಮಿಳು, ಗುಜರಾತಿ, ಹಿಂದಿಗಳಲ್ಲಿಯೂ ಈ ವಸ್ತುವನ್ನು ಆಧರಿಸಿ ಕೃತಿ ರಚನೆಯಾಗಿದೆ. ತಮಿಳು ಕೃತಿಯನ್ನು ಬಿಟ್ಟರೆ ಪ್ರಾಂತ ಭಾಷೆಗಳಲ್ಲಿ ರಚನೆಯಾಗಿರುವ ಉಳಿದ ಕೃತಿಗಳು ಜನ್ನನಿಗಿಂತ ಈಚಿನವು" ಈ ಮಾತುಗಳು ಕಾವ್ಯದ ವಸ್ತು ಇತಿಹಾಸವನ್ನು ಕುರಿತು ಹೇಳುವುದಾದರೆ. ಕಾವ್ಯದ ವಿಷಯಕ್ಕೆ ಸಂಬಂಧಿಸಿದ ಮಾತು

Vol. 2, Issue: 5, June: 2014
ISSN:(P) 2347-5404 ISSN:(O)2320 771X

ಹೀಗಿದೆ``ದಾಂಪತ್ಯ ನೆಮ್ಮದಿಗೆ ಅಗತ್ಯವಾದ ನಿಷ್ಠೆಯ ಚಾಕಟ್ಟು ಅಸಂಯಮದ ಕಾರಣದಿಂದಾಗಿ ಒಡೆದು, ಚಿತ್ರ ಧೂಳೀಪಟವಾದದ್ದು ಈ ಕಾವ್ಯದ ಒಂದು ಮುಖವಾದರೆ ಎರಡು ಜೀವಗಳು ಜನ್ಮ ಜನ್ಮದಲ್ಲಿ ಅಲೆದು ಕಡೆಗೆ ತಿಳುವಳಿಕೆಯ ಬಿಡುಗಡೆ ಮುಟ್ಟಿದ್ದು ಈ ಕಥೆಯ ಇನ್ನೊಂದು ಮುಖ" ಅಷ್ಟೇ ಅಲ್ಲದೇ, ``ಈ ಕಾರಣದಿಂದಾಗಿ ನಿಷ್ಠಾಹೀನವೂ ಹಿಂಸಾಮಯವೂ ಆದ ಇಂದಿನ ಜಗತ್ತಿಗೆ ಈ ಕೃತಿ ತನ್ನ ಒಟ್ಟು ನಿಲುವಿನಲ್ಲಿ ಸಮಕಾಲೀನವಾಗಿ ಕಂಡರೆ ಆಶ್ಚರ್ಯವಿಲ್ಲ"

ಕಾವ್ಯದ ಮುಖ್ಯ ಆಶಯವನ್ನು ಕುರಿತು ಗಿರಡ್ಡಿ ಗೋವಿಂದರಾಜು ಅವರ `ಜನ್ನನ ಯಶೋಧರ ಚರಿತೆ' ಎಂಬ ಲೇಖನದಲ್ಲಿ ``ಯಶೋಧರ-ಅಮೃತಮತಿಯರ ಪ್ರಣಯ ಪ್ರಸಂಗವೇ `ಯಶೋಧರ ಚರಿತೆ'ಯ ತಿರುಳು ಎಂದು ಹೇಳುವುದಾದರೆ, ಆಕಾವ್ಯದ ಉದ್ದೇಶವನ್ನು ಸರಿಯಾಗಿ ಗ್ರಹಿಸಿದಂತಾಗುವುದಿಲ್ಲ. ಕಾವ್ಯ ಇನ್ನೂ ಅನೇಕ ಪ್ರಸಂಗಗಳಂತೆ ಇದೂ ಒಂದು ಮಹತ್ವದ ಪ್ರಸಂಗವೇ ಹೊರತು, ಅದೇ ಕಾವ್ಯದ ಜೀವಾಳವಲ್ಲ. ಹಾಗೆ ಹೇಳುವುದು `ಯಶೋಧರ ಚರಿತೆ ಕಾವ್ಯದ ಸಂವಿಧಾನ ಕೌಶಲಕ್ಕೆ ಅಪಚಾರ ಮಾಡಿದಂತೆ"ಎನ್ನುತ್ತಾರೆ. ಕೆಲವರ ಚಿಂತನೆಗಳನ್ನು ಆಕ್ಷೇಪಿಸುತ್ತಲೆ ``ಒಂದು ಕಾವ್ಯ ಯಾವುದೇ ಪ್ರಾತ್ರದ ಅಥವಾ ಪ್ರಸಂಗದ ಔಚಿತ್ಯ ಮತ್ತು ಯಶಸ್ಸು ಆ ಕಾವ್ಯದ ಒಟ್ಟು ಆಶಯದಿಂದಲೇ ನಿರ್ಣಯಿಸಲ್ಪಡಬೇಕೇ ಹೊರತು, ಕಾವ್ಯದ ಹೊರಗಿನ ವೈಜ್ಞಾನಿಕ ಸಿದ್ಧಾಂತಗಳಿಂದಲ್ಲ. ಕಾವ್ಯದ ಪುಟಗಳ ಹೊರಗಿರುವ ವಾಸ್ತವಿಕ ಜೀವನದಿಂದಲ್ಲ" ಎನ್ನುತ್ತಾರೆ.

ಹೀಗೆ ಇನ್ನೂ ಹಲವು ಜನ ಮಹನೀಯರು ಈ ಕಾವ್ಯ ಕುರಿತು ಚರ್ಚಿಸಿ ಮಾಡಿರುತ್ತಾರೆ. ಡಿ.ಎಲ್.ನರಸಿಂಹಾಚಾರ್, ಆರ್.ನರಸಿಂಹಾಚಾರ್, ಕೆ.ವೆಂಕಟರಾಮಪ್ಪ, ಕೀರ್ತಿನಾಥ ಕುರ್ತಕೋಟಿ, ಎಸ್.ವಿ.ರಂಗಣ್ಣ, ಸಿ.ಎನ್ ರಾಮಚಂದ್ರನ್, ಹಂಪನಾಗರಾಜಯ್ಯ, ಬಸವರಾಜ ಕಲ್ಗುಡಿ, ಎನ್.ಎಸ್.ತಾರಾನಾಥರು, ರಾಜೇಂದ್ರಚೆನ್ನಿ, ಪ್ರೀತಿಶುಭಚಂದ್ರ, ದಾಮೋದರ ರಾವ್, ಬಿ.ಎ.ವಿವೇಕರೈ, ಎಚ್.ಎಸ್.ರಾಘವೇಂದ್ರರಾವ್ ಇತ್ಯಾದಿ. ಹೀಗೆ ಕಾವ್ಯ ಕುರಿತು ಬಂದಿರುವ ವಿಚಾರವನ್ನು ದಾಖಲಿಸುತ್ತ ಹೋದರೆ ಏನು ಪ್ರಯೋಜನವಿಲ್ಲ ಆಧುನಿಕರಣ ಮತ್ತು ಜಾಗತಿಕರಣದ ಸಮಸ್ಯೆಯ ನಡುವೆ ಮರು ಓದು ಮತ್ತು ಮರು ವ್ಯಾಖ್ಯಾನ ಬಹಳ ಅಗತ್ಯವಾಗಿದೆ. ಜನ್ನನ ಕಾವ್ಯ ನಿರ್ಮಾಣದ ಕಾಲವನ್ನು ಗಮನದಲ್ಲಿಟ್ಟು ಕೊಂಡು ನಾನು ಈ ಕಾವ್ಯವನ್ನು ಗಮನಿಸಿದಾಗ ಆತನು ಹಳೆಯ ಚಂಪೂ ಮಾರ್ಗದ ಕಾವ್ಯದ ರಚನೆಯನ್ನು ಬದಲಾವಣೆಗೆ ಒಳಪಡಿಸಿದಂತೆ ಕಾಣುತ್ತದೆ.

**ಪರಾಮರ್ಶೆ ಆಕರ ಕೃತಿಗಳು**

1. ಯಶೋಧರ ಚರಿತೆ ಸಂ: ಕ.ವೆಂ.ರಾಘವಾಚಾರ್ ಮೈ.ವಿ.ವಿ.
2. ಕಾವ್ಯ ಸಮೀಕ್ಷೆ: (ಲೇಖನ:ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ) ತೀ.ನಂ.ಶ್ರೀ ಕಾವ್ಯಮಾಲೆ
3. ದ್ರೌಪತಿಯ ಶ್ರೀಮುಡಿ: ಕುವೆಂಪು ಉದಯರವಿ ಪ್ರಕಾಶನ ಮೈಸೂರು.
4. ನವ್ಯವಿಮರ್ಶೆ (ಯಶೋಧರ ಚರಿತೆ ಕುರಿತು) ಗಿರಡ್ಡಿಗೋವಿಂದರಾಜ, ಅಕ್ಷರ ಪ್ರಕಾಶನ ಸಾಗರ
5. ಅಮೃತಮತಿಯ ಸ್ವಗತ: ಹೆಚ್.ಎಲ್.ಪುಷ್ಪ ಅನ್ವೇಷಣೆ ಪ್ರಕಾಶನ ಬೆಂಗಳೂರು.
6. ಯಶೋಧರ ಚರಿತೆ ಮತ್ತು ಅಭಿಜಾತ ಪರಂಪರೆ: ಡಾ.ಕರಿಗೌಡ ಬೀಚನಹಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.